ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮಂಚ್ಚದಹಳ್ಳಿ. ಕಂದಕೂರಿಗೆ ಆಸ್ಪತ್ರೆ ಬದಲಾಯಿಸಿರುವುದನ್ನು ಹೇಳಿದ್ದಾರೆ. ಇದರಿಂದ ಜನರಿಗೆ ತೊಂದರೆಯಾಗಿದೆಯೆಂದು ಹೇಳಲಿ ಅದಕ್ಕೆ ರಾಜಕೀಯ ಬೆರಸಿ ಇವರಿಗೆ ತಲೆ ಕೆಟ್ಟು ಹೋಗಿದೆಯೆಂದು ಏತಕ್ಕೆ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರಾಜಕೀಯ ಮಾಡುವವರು ನೀವು.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ನಡೆದಿದ್ದನ್ನು ಹೇಳುತ್ತಿದ್ದೇನೆ. ಅವರು ಹೇಳಿದನ್ನು ನಾವು ಕೇಳಬೇಕು. ನಾವು ಹೇಳುವುದನ್ನು ಅವರು ಕೇಳುವಂಥ ಸೌಜನ್ಯ ಇಲ್ಲದೇ ಇದ್ದರೆ ಹೇಗೆ ?

ಶ್ರೀ ಎಂ. ಮಹದೇವ್.—ಸ್ವಾಮಿ, ನಮಗೆ ಮಾನ್ಯ ಸಾಗರ್‌ರವರ ಉತ್ತರ ಬೇಡ.

ಅಧ್ಯಕ್ಷರು—ಮಹದೇವ್‌ರವರೇ ನಿಮ್ಮಷ್ಟು ಸರ್ವಜ್ಞರು ಅಲ್ಲದೇ ಇರಬಹುದು, ಅವರು ಹೇಳುವುದನ್ನು ಕೇಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಂತ್ರಿಗಳಿಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ತಪ್ಪು ತಿಳಿದು ಕೊಳ್ಳದೇ ಹೋದರೆ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಪರಿಹಾರ ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಮಾಡಿರುವುದನ್ನು ಮೊದಲು ಕ್ಯಾನ್ಸಲ್ ಮಾಡಿ. This is a case which I have brought to your notice. Before four months I openly told the Chief Minister and also to Sri Deve Gowda I have also given in writing to Health Minister Sri Sindhya stating that such and such hospital has been shifted from my constituency to Sri Vishwanath Reddy's constituency. ಇದು ಆಗಬಾರದು. ತಕ್ಷಣ ರಿಟೈನು ಮಾಡುತ್ತೇವೆಂದು ಹೇಳಿದರೂ ಇದುವರೆಗೆ ಆಗಿಲ್ಲ. ಇದೇ ರೀತಿ ಇನ್ನೂ ಮೂರು ನಾಲ್ಕು ಕೇಸ್‌ಗಳು ಇವೆ, ಚುನಾವಣೆಯಲ್ಲಿ ನನಗೆ ತೊಂದರೆ ಕೊಡಿ, ನಾನು ಎದುರಿಸುತ್ತೇನೆ, ಜನರಿಗೆ ಏತಕ್ಕೆ ತೊಂದರೆ ಕೊಡಬೇಕು.

MR. SPEAKER.—You have just now said it.

SRI M. MALLIKARJUN KHARGE.—All the cases are like this. He is interfering every day.

4. ಸರ್ಕಾರಿ ನಿರ್ಣಯ

ವಿದ್ಯುಚ್ಛಕ್ತಿ ಮಂಡಲಿ ಸಾಲ ಎತ್ತುವ ಬಗ್ಗೆ.

ಶ್ರೀ ಜೆ.ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಹಾಗೂ ಅಬಕಾರಿ ಮಂತ್ರಿ) ಅವರು.—

೧೯೪೯ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು ಶಾಸನದ(೧೯೪೯ನೇ ಇಸವಿಯ ಕೇಂದ್ರ ಶಾಸನ ೫೪ನೇ) ೬೫ (೩) ಕಲಮಿನ ಮೇರೆಗೆ, ಪರಮಾವಧಿ ಹಣವನ್ನು ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಗೊತ್ತು ಮಾಡಲು ರಾಜ್ಯದ ವಿಧಾನಸಭೆಯಂ ಅನುಮತಿ ಪಡೆದುಕೊಳ್ಳುವುದು ಅವಶ್ಯಕವಾಗಿದ್ದು ಸದರಿ ಕಲಮಿನ (೧)ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಯಾವುದೇ ಕಾಲದಲ್ಲಾಗಲೀ ಸಾಲವಾಗಿ ಪಡೆದು ಕೊಳ್ಳಬಹುದಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಯಾವುದೇ ಕಾಲದಲ್ಲಿ ೧೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆಯಬಹುದೆಂದು ರಾಜ್ಯ ಸರ್ಕಾರದವರ ಸಲಹೆಯನ್ನು ೨೭-೮-೭೪ರಂದು ಕರ್ನಾಟಕ ವಿಧಾನ ಸಭೆಯು ಅನುಮೋದಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರಂ ಯಾವುದೇ ಕಾಲದಲ್ಲಿ ಸದರಿ ಶಾಸನದ ೬೫ (೩) ಕಲಮಿನ ಮೇರೆಗೆ ೨೭-೮-೧೯೭೪ ರಿಂದ ೧೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆಯಬಹು

ದೆಂಬುದಾಗಿ ಕರ್ನಾಟಕ ಸರ್ಕಾರದವರು ಗೊತ್ತುಪಡಿಸಿದ ಮೊಬಲಗನ್ನು ೧೦-೯-೧೯೭೪ನೇ ದಿನಾಂಕದ ಪಿ.ಡಬ್ಲ್ಯೂ.ಡಿ. ೮೪ ಇಇಬಿ ೭೩ನೇ ಕ್ರಮಾಂಕದ ಸರ್ಕಾರೀ ಆದೇಶದಲ್ಲಿ ವಿಧಿಸಲಾಗಿದ್ದಿತು.

ಸದರಿ ಶಾಸನದ ೬೫ನೇ ಕಲಮಿನ (೧)ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಯಾವುದೇ ಕಾಲದಲ್ಲಾಗಲೀ ಸಾಲದ ರೂಪದಲ್ಲಿ ಪಡೆದುಕೊಳ್ಳಬಹುದಾದ ಹಣದ ಪರಮಾವಧಿ ಮೊತ್ತವನ್ನು ೩೦೦ ಕೋಟಿ ರೂಪಾಯಿಗಳವರೆಗೆ ಗೊತ್ತುಮಾಡಬೇಕೆಂದು ರಾಜ್ಯ ಸರ್ಕಾರದವರು ಉದ್ದೇಶಿಸಿದ್ದಾರೆ.

ಆದ್ದರಿಂದ, ಈಗ ಮೇಲ್ಕಂಡ ಶಾಸನದ ೬೫ನೇ ಕಲಮಿನ (೧)ನೇ ಉಪಕಲಮಿನ ಮೇರೆಗೆ ವಿದ್ಯುಚ್ಛಕ್ತಿ ಮಂಡಲಿಯವರು ಯಾವುದೇ ಕಾಲದಲ್ಲಾಗಲೀ ಸಾಲವಾಗಿ ಪಡೆದುಕೊಳ್ಳಬಹುದಾದ ಪರಮಾವಧಿ ಮೊತ್ತವನ್ನು ಸದರಿ ಶಾಸನದ ೬೫ನೇ ಕಲಮಿನ (೩)ನೇ ಉಪಕಲಮಿನ ಮೇರೆಗೆ ರಾಜ್ಯ ಸರ್ಕಾರದವರು ೩೦೦ ಕೋಟಿ ರೂಪಾಯಿಗಳವರೆಗೆ ಗೊತ್ತು ಪಡಿಸಬೇಕೆಂದಿರುವ ಸಲಹೆಗೆ ರಾಜ್ಯದ ವಿಧಾನಸಭೆಯವರು ಈ ಮೂಲಕ ಅನುಮತಿಯನ್ನು ನೀಡುತ್ತಾರೆ ಎಂದು ಸೂಚಿಸುವುದು.

ಇದನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ೩೦೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವುದಕ್ಕೆ ಸಭೆಯ ಅನುಮತಿಯನ್ನು ಕೇಳುತ್ತಿದ್ದಾರೆ. ತಮ್ಮ ಕಛೇರಿಯಿಂದ ಈ ದಿವಸ ಬರೀ ಸರ್ಕಾರಿ ಕೆಲಸ ಎಂಬ ಒಂದು ನೋಟೀಸ್ ನಮಗೆ ಬಂದಿತ್ತು. ಆದರೆ ಈ ದಿವಸ ಮಂತ್ರಿಗಳು ಈ ರೀತಿಯ ನಿರ್ಣಯವನ್ನು ಮಂಡಿಸುತ್ತಿದ್ದಾರೆ. ಅದರ ಬಗ್ಗೆ ಮಂತ್ರಿಗಳು ವಿವರಣೆಯನ್ನು ಹೇಳದೇ ಹೋದರೂ ತಾವು ಅದನ್ನು ಓಟಿಗೆ ಹಾಕಿಬಿಡುತ್ತಿದ್ದೀರಿ. ಸರ್ಕಾರ ಕೂಡ ಇದರ ಬಗ್ಗೆ ಏನೂ ಪೂರ್ವ ಭಾವೀ ಸೂಚನೆಗಳನ್ನು ನೀಡಿದೆ ಸಭೆಯ ಅನುಮತಿಗಾಗಿ ಈ ನಿರ್ಣಯವನ್ನು ಮಂಡಿಸಿದ್ದಾರಲ್ಲಾ ಏಕೆ ?

ಶ್ರೀ ಜೆ. ಎಚ್. ಪಟೇಲ್.—ಇದರ ಮೇಲೆ ಹೆಚ್ಚು ವಿವರಣೆ ಬೇಕಾಗುವುದಿಲ್ಲ ಅಂತ ನಾನಂ ತಿಳಿದುಕೊಂಡಿದ್ದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಹಿಂದೆ ೧೯೭೪ನೇ ಇಸವಿಯಲ್ಲಿ ೧೫೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವುದಕ್ಕೆ ಸಭೆಯ ಅನುಮತಿಯನ್ನು ಪಡೆದಿತ್ತು. ಕಾನೂನು ಪ್ರಕಾರ ಮತ್ತು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಈ ಸಾಲದ ಮಿತಿಯನ್ನು ಹೆಚ್ಚು ಮಾಡುವುದಕ್ಕೆ ಬರೀ ಸರ್ಕಾರದ ತೀರ್ಮಾನದಿಂದ ಆಂದರೆ ಸಂಪುಟದ ತೀರ್ಮಾನದಿಂದ ಮಾಡುವುದಕ್ಕಾಗುವುದಿಲ್ಲ ರಾಜ್ಯದ ವಿಧಾನ ಸಭೆಯ ಅನುಮತಿಯನ್ನು ಪಡೆಯಬೇಕೆಂದೂ ಹೇಳಿದ್ದಾರೆ. ೧೦ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಸಾಲವನ್ನು ಪಡೆಯಬೇಕಾದರೆ, ಅದಕ್ಕೆ ರಾಜ್ಯದ ವಿಧಾನ ಸಭೆಯ ಅನುಮತಿಯನ್ನು ಪಡೆಯಬೇಕೆಂದೂ ಹೇಳಿದ್ದ ಕಾರಣ ಹಿಂದೆ ೧೫೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವುದಕ್ಕೆ ಸಭೆಯ ಅನುಮತಿಯನ್ನು ಪಡೆದಿದ್ದು, ಈಗ ಅದರ ಮಿತಿಯನ್ನು ೩೦೦ ಕೋಟಿ ರೂಪಾಯಿಗಳವರೆಗೆ ಏರಿಸಿರುವುದರಿಂದ ಈ ಸಾಲವನ್ನು ಪಡೆಯುವುದಕ್ಕೆ ಸಭೆಯ ಒಪ್ಪಿಗೆಗಾಗಿ ಮಂಡಿಸಿದ್ದೇನೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯ ಚಟುವಟಿಕೆ ೧೯೭೪ರಲ್ಲಿ ೧೫೦ ಕೋಟಿ ರೂಪಾಯಿಗಳವರೆಗೆ ಇದ್ದದ್ದು ಅದರ ಕಾರ್ಯಕ್ರಮದ ವಿಸ್ತಾರ ಮತ್ತು ಅದಕ್ಕೆ ಹಣ ಕಾಸಿನ ಅವಶ್ಯಕತೆ ಹೆಚ್ಚು ಇದ್ದು ಬೆಲೆ ಕೂಡ ಒಂದಕ್ಕೆ ೪ ಪಟ್ಟು ಹೆಚ್ಚಾಗಿರುವುದರಿಂದ ಸಾಲವನ್ನು ಪಡೆಯುವುದಕ್ಕೆ ೧೫೦ ಕೋಟಿ ರೂಪಾಯಿಗಳವರೆಗೆ ಇದ್ದಂತಹ ಲಿಮಿಟ್‌ನ್ನು ೩೦೦ ಕೋಟಿ ರೂಪಾಯಿಗಳವರೆಗೆ ಹೆಚ್ಚು ಮಾಡಬೇಕೆಂದು ಸಭೆಯ ಅನುಮತಿಯನ್ನು ಕೇಳಿದ್ದೇನೆ. ಈ ಹಂತದಲ್ಲಿ ಇದರ ಬಗ್ಗೆ ಹೆಚ್ಚು ವಿವರಣೆ ಬೇಕಾಗುವುದಿಲ್ಲ ಅಂತ ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಎಚ್ ರಂಗನಾಥ್.—ಮಂತ್ರಿಗಳು ಬಹಳ ಸಾಲಭವಾಗಿ ಹೇಳಿದರು. ಈಗ ೧೫೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವುದಕ್ಕೆ ಇರುವಂತಹ ಮಿತಿಯನ್ನು ೩೦೦ ಕೋಟಿ ರೂಪಾಯಿಗಳವರೆಗೆ ಪಡೆಯಲು ಸಭೆಯ ಅನುಮತಿಯನ್ನು ಕೇಳುತ್ತಿದ್ದೇವೆಂದು ಹೇಳಿದರು. ಕಾರಣ ಕೆಲಸ ಕಾರ್ಯಗಳ ಖರ್ಚು ಮತ್ತಿತರ ಬೆಲೆಗಳೂ ಜಾಸ್ತಿಯಾಗಿದೆ ಎನ್ನುವ ವಾತಾವರಣವೂ ಕೂಡ ಹೇಳಿದ್ದಾರೆ. ನಾನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆಂದರೆ–ನಾನು ಮಂತ್ರಿಗಳ ಮೇಲೆ ಆಪಾದನೆ ಮಾಡುತ್ತಿಲ್ಲ. ಈ ಸದನ ಎಲ್ಲ ವಿಚಾರದಿಂದ ಮರೆಮಾಡಲ್ಪಟ್ಟಿದೆ ಅಂತ ಹೇಳಿದರೆ

ಬಹಳ ಮಟ್ಟಿಗೆ ಮಂತ್ರಿಗಳು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮೊನ್ನೆತಾನೆ ಕಾರ್ಯದರ್ಶಿಯವರಿಂದ ನೋಟೀಸ್ ಬಂತು–ತಮ್ಮ ಅಪ್ಪಣೆ ಮೇರೆಗೆ ಅದರಲ್ಲಿ ಏನಿದೆ ಎಂದರೆ ಒಂದೇ ದಿವಸದ ಸಭೆ. ಅದರಲ್ಲೂ ಸರ್ಕಾರದ ಕೆಲಸ ಅಂತ ಇತ್ತು. ಆದಕ್ಕೆ ಸಂಬಂಧಪಟ್ಟಂತೆ ಏನಾದರೂ ಮಾಹಿತಿ ಇದ್ದಲ್ಲಿ ಅದನ್ನು ಸರ್ಕಾರ ಹಿಂದೆಯೇ ಒದಗಿಸಿಕೊಟ್ಟಿದ್ದರೆ. ನಾವು ಇವತ್ತು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಮಸ್ತ ವಿದ್ಯುಚ್ಛಕ್ತಿ ಮಂಡಲಿ ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ೧೦ ಕೋಟಿ ವರೆಗೆ ಸಾಲವನ್ನು ಪಡೆಯಬೇಕಾದರೆ, ಸರ್ಕಾರವೇ ತೀರ್ಮಾನ ಮಾಡಬಹುದೆಂದು ಒಪ್ಪಿಕೊಂಡಿರತಕ್ಕಂತಹದ್ದು ಆದು ಕಾನೂನಿನಲ್ಲೂ ಕೂಡ ಇದೆ. ಆದರೆ ೧೦ ಕೋಟಿಗಿಂತ ಜಾಸ್ತಿ ಸಾಲವನ್ನು ಮಾಡಬೇಕೆಂದಾಗ ಮಾತ್ರ ಅದು ಸಭೆಯ ಮುಂದೆ ಬಂದು ಸಭೆಯ ಅನುಮತಿಯನ್ನು ಪಡೆಯಬೇಕು. ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಮಂತ್ರಿಗಳಿಗೆ ಈ ವಿಷಯ ಸದನದ ಮುಂದೆ ಬರುತ್ತವೆಂದು ಗೊತ್ತಿದ್ದು. ಅದಕ್ಕೆ ಸಭೆಯ ಒಪ್ಪಿಗೆಯನ್ನು ಪಡೆದುಕೊಳ್ಳಬೇಕೆಂಬ ದೃಷ್ಟಿಯಿಂದ ಆದರ ಪೂರ್ಣ ಮಾಹಿತಿಯನ್ನು ನಮಗೆ ಪೂರ್ವಭಾವಿಯಾಗಿ ಒದಗಿಸಿದ್ದರೆ ನಾವು ಕೂಡ ಅದನ್ನು ಅಭ್ಯಾಸ ಮಾಡಿ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು. ಮತ್ತೆ ಪರಿಸ್ಥಿತಿ ಏನು ಇದೆ ಅಂತ ತಿಳಿದುಕೊಳ್ಳುವುದಕ್ಕೂ ಕೂಡ ಅನುಕೂಲವಾಗುತ್ತಿತ್ತು. ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ನಡೆಸುತ್ತಿದ, ಮುಂದೆ ಏನು ಮಾಡಬೇಕೆಂದಿದ್ದಾರೆ ಎನ್ನತಕ್ಕಂತಹದ್ದನ್ನು ಏನೂ ಹೇಳದಿದ್ದರೆ ಹೇಗೆ ? ಬಹಳ ಮಟ್ಟಿಗೆ ನಾವು ಬೆಳಗ್ಗೆ ೧೦ ಗಂಟೆಯಿಂದ ೨ ಗಂಟೆಯವರೆಗೆ ಇದ್ದು, ಓಟು ಮಾಡಿ ಮನೆಗೆ ಹೋಗೋವುದು ಅಂತ ನಾನಾದರೂ ಭಾವಿಸಿಕೊಂಡಿದ್ದೆ. ಮಂತ್ರಿಗಳು ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅವುಗಳೂ ಕೂಡ ನಡೆಯುತ್ತಿವೆ. ಕಾಳಿ ಪ್ರಾಜೆಕ್ಟ್ ನಡೆಯುತ್ತಿದೆ. ಮತ್ತೊಂದು ನಡೆಯುತ್ತಿದೆ. ಇರಬಹುದು. ಮಂತ್ರಿಗಳಿಗೆ ಅವರ ದೃಷ್ಟಿಯಲ್ಲಿ ಸಾಲ ಮಾಡತಕ್ಕಂತಹ ಅವಶ್ಯಕತೆ ಜಾಸ್ತಿಯಾಗಿರಬಹುದು. ಅದಕ್ಕಾಗಿ ಸಭೆಯ ಒಪ್ಪಿಗೆಯನ್ನು ಕೇಳುತ್ತಿದ್ದಾರೆ, ಆದರೆ ಮೊದಲೂ ಕೂಡ ಇದನ್ನು ಪ್ರಶ್ನೆ ಮಾಡತಕ್ಕಂತಹ ವಿಚಾರ ಇದು. ೧೦ ಕೋಟಿಯಿಂದ ೧೫೦ ಕೋಟಿ ರೂಪಾಯಿಂಗಳವರೆಗೆ ಸಾಲವನ್ನು ಮಾಡುವುದಕ್ಕೆ ಸಭೆಯ ಅನುಮತಿಯನ್ನು ಪಡೆದಾಗಲೂ ಕೂಡ ಹೆಚ್ಚು ಪ್ರಸ್ತಾಪ ಮಾಡಿರಲಿಕ್ಕಿಲ್ಲ. ಅದು ಏಕೆ ಏನು ಎನ್ನುವುದನ್ನು ಈಗ ಹೇಳುವುದು ಬೇಡ. ೧೫೦ ಕೋಟಿ ರೂಪಾಯಿಂಗಳವರೆಗೆ ಸಾಲವನ್ನು ಮಾಡಲು ಸಭೆಯು ಅನುಮತಿಯನ್ನು ಪಡೆದುಕೊಂಡಿದೆ. ಆದರೆ ಈಗ ಒಂದೇ ಸಾರಿ ೧೫೦ ಇದ್ದದನ್ನು ೩೦೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವುದಕ್ಕಾಗಿ ಸಭೆಯು ಅನುಮತಿಯನ್ನು ಮಂತ್ರಿಗಳು ಕೇಳಿದ್ದಾರೆ. ನಾನು ಆ ಬಗ್ಗೆ ಅಭ್ಯಾಸ ಮಾಡದೇ ಇರುವುದರಿಂದ ನಿಖರವಾಗಿ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ರಾಜ್ಯಾಂಗದಲ್ಲೂ, ಸರ್ಕಾರ ಕೂಡ ಸಾಲವನ್ನು ಮಾಡಬೇಕಾದರೆ ಕೆಲವೊಂದು ವಿತಿಯನ್ನು ಹಾಕಿಕೊಳ್ಳಬೇಕೆಂ ಅಂತ ಇದೆ. ಆದರೆ ಸರ್ಕಾರ ಮನಸ್ಸು ಬಂದಂತೆ ಸಾಲವನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಇಲ್ಲ. ಆದರೆ ಮಂತ್ರಿಗಳು ಅವರ ದೃಷ್ಟಿಯಲ್ಲೂ ಕೂಡ ಇದನ್ನು ಸ್ವಲ್ಪ ಯೋಚನೆ ಮಾಡುವುದು ಒಳ್ಳೆಯದು. ಆವರೆ ಒಂದೇ ಸಾರಿ ೧೫೦ ಕೋಟಿ ರೂಪಾಯಿಗಳಿಂದ ಏಕಾ ಏಕಿ ೩೦೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವುದಕ್ಕೆ ಅನುಮತಿಯನ್ನು ಪಡೆದು ಕೊಂಡರೆ, ಅದು ಯಾವ ಸರ್ಕಾರವೇ ಆಗಲಿ. ಕೆಲವು ವೇಳೆ ಅದು ಉಪಯೋಗ ಕೂಡ ಆಗಬಹುದು. ಮತ್ತೆ ಕೆಲವು ಸಾರಿ ಅದು ದುರುಪಯೋಗ ಕೂಡ ಆಗಬಹುದು. ಇದು ಆಗಿನಿಂದಲೂ ಬೆಳೆದು ಬಂದಂತಹ ಅಭ್ಯಾಸವಾಗಿದೆ. ಯಾರೂ ಕೇಳುವುದಿಲ್ಲ, ಅಸೆಂಬ್ಲಿಗೆ ಬಂದರೆ ಅಲ್ಲಿ ಯಾರೂ ನೋಡುವುದಿಲ್ಲ, ಪಾಸಾಗಿಬಿಡುತ್ತಿದೆ. ಆ ನಂತರ ಹೇಗಾದರೂ ಮಾಡಬಹುದೆಂದು ಕೆಲವು ಸಾರಿ ಬೇ–ಜವಾಬ್ದಾರಿಯಿಂದ ನೋಡತಕ್ಕಂತಹ ಅಧಿಕಾರಿಶಾಹಿ ನಮ್ಮಲ್ಲಿ ಬೆಳೆದು ಬರುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಹೆಚ್ಚು ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಆದರೂ ಸಭೆಯ ಒಪ್ಪಿಗೆಯನ್ನು ಪಡೆಯಬೇಕೆಂದು ಅವರು ಹೇಳುತ್ತಾರೆ. ಆದಕ್ಕೆ ಬದಲಾಗಿ ಇವತ್ತಿನ ದಿವಸ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ಕಾರ್ಯಕ್ರಮಗಳು ನಡೆಯುತ್ತಿವೆ, ಎಷ್ಟು ಹಣವನ್ನು ಸಾಲ ಮಾಡಿದ್ದೀರಿ, ಏನು ಪರಿಸ್ಥಿತಿ ಇದೆ ಎನ್ನತಕ್ಕಂತಹ ಅಂಕಿ ಅಂಶಗಳ ಮಾಹಿತಿಯನ್ನು ನಮ್ಮ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು. ಬಹಳ ಮಟ್ಟಿಗೆ ಆ ದೃಷ್ಟಿಯಲ್ಲೂ ಸಭೆಯ ಗಮನಕ್ಕೆ ಕೆಲವು ವಿಚಾರಗಳನ್ನು ತಂದು ಸ್ವಲ್ಪ ಸ್ಪಷ್ಟೀಕರಣ ಕೊಟ್ಟರೆ ಉತ್ತಮವೆಂಬುದು ನನ್ನ ಎಂದು ಆಸೆ.

ಶ್ರೀ ಜೆ. ಎಚ್. ಪಟೇಲ್.—ಸನ್ಮಾನ್ಯ ಸದಸ್ಯರ ವಿಚಾರ ಸರಿ ಇದೆ. ಆದರೂ ಇವತ್ತಿನ ದಿವಸ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಕ್ರಮಗಳಿಗನುಸಾರವಾಗಿ ಹಣಕಾಸಿನ ಅವಶ್ಯಕತೆ ಇದೆ. ಆದರೆ ಇವುಗಳ ಮೇಲೆ ಈ ಸಂದರ್ಭದಲ್ಲಿ ಚರ್ಚೆ ಅನಾವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಆಯವ್ಯಯವನ್ನು ಪ್ರತಿ ವರ್ಷ ಈ ಸಭೆಯ ಮುಂದೆ ಇಡುತ್ತಿದ್ದೇವೆ. ಈಗ ಪಡೆಯುತ್ತಿರುವ ಕೆಲಸಗಳು ಯಾವ ಯಾವ ಹತಂದಲ್ಲಿದೆ ? ಯೋಜನೆಗಳಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿದ್ದೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ೧೯೮೩-೮೪ನೇ ವರ್ಷದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕೆಲಸದ ಬಗ್ಗೆ ಸೆಂಬ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯ ಪ್ಲಾನಿಂಗ್ ಕಮಿಷನ್‌ರವರ ಸಮೀಕ್ಷೆಯಲ್ಲಿ ಕೇಂದ್ರ ಸರ್ಕಾರದವರು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದರ ಹಿಂದಿನ ವರ್ಷ ಕೇವಲ ೬೦೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದರು. ಆದರೆ ೧೯೮೩-೮೪ನೇ ವರ್ಷದಲ್ಲಿ ೧೮೯೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಯನ್ನು ಕೊಡಂತ್ತಿದ್ದೇವೆ. ಹಿಂದಿನ ವರ್ಷ ಕೇವಲ ೨೨ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಕೊಟ್ಟಿದ್ದಾರೆ. ಆದರೆ ಈ ವರ್ಷ ೩೭ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ವನ್ನು ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಕರ್ನಾಟಕ ಸರ್ಕಾರ ಇಡೀ ರಾಷ್ಟ್ರದಲ್ಲಿ ಒಂದನೇ ಸ್ಥಾನವನ್ನು ಪಡೆದಿದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಅದನ್ನು ಇಲ್ಲ ಅಂತ ಹೇಳಲಿಲ್ಲ. ೩೦೦ ಕೋಟಿ ರೂಪಾಯಿಗಳವರೆಗೆ ಸಾಲವನ್ನು ಪಡೆಯುವಂತಹ ಉದ್ದೇಶದ ಬಗ್ಗೆ ವಿವರಣೆ ಕೇಳಿದೆ ಅಷ್ಟೆ.

ಶ್ರೀ ಜೆ. ಎಚ್. ಪಟೇಲ್.—ಸನ್ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಕ್ರಮಗಳಲ್ಲಿ ವಿಶೇಷವಾಗಿ ಟ್ರಾನ್ಸ್‌ಮಿಷನ್ ಲೈನ್ ಮತ್ತು ಸಿಸ್ಟಂ ಇಂಪ್ರೂವ್‌ಮೆಂಟ್, ಇವೆರಡರ ಬಗ್ಗೆ ಬಹಳ ದೊಡ್ಡದಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಅದರ ವಿವರಗಳನ್ನು ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟಿದ್ದರೆ ನಾನು ತರಿಸಿಕೊಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರ ಒಂದು ದಿವಸದ ಮಟ್ಟಿಗೆ ಈ ಸಭೆಯನ್ನು ಕರೆಯ ಬೇಕೆಂದರೆ ಒಂದು ದಿವಸಕ್ಕೆ ಏನು ಕಾರ್ಯಕ್ರಮ ಎಂಬುದನ್ನು ಮಂತ್ರಿ ಮಂಡಲದ ಸಭೆಯಲ್ಲಿ ಅದು ಬಂದಾಗ ಅಲ್ಲಿ ಯಾವ ಯಾವ ಕಾರ್ಯಕ್ರಮವನ್ನು ಆ ದಿವಸ ಹಾಕಬೇಕೆಂದು ತೀರ್ಮಾನ ಮಾಡಿದ್ದರೆ, ಅದರಂತೆ ಅಧ್ಯಕ್ಷರ ಕಛೇರಿಯಿಂದ ಇಂಥಿತ ಕಾರ್ಯಕ್ರಮ ಇದೆ ಎಂಬುದರ ಬಗ್ಗೆ ನೋಟೀಸ್ ನಮಗೆ ಬರಂತಾ ಇತ್ತು.

ಶ್ರೀ ಜೆ. ಹೆಚ್. ಪಟೇಲ್.—ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು, ವಿದ್ಯುಚ್ಛಕ್ತಿ ನಿಗಮದ, ವಿದ್ಯುಚ್ಛಕ್ತಿ ಇಲಾಖೆಯ ಕಾರ್ಯಕ್ರಮಗಳು ಯಾವ ರೀತಿ ನಡೆಯುತ್ತವೆಂದು ಗೊತ್ತಿದೆ. ಈಗ ಅದರ ಬಗ್ಗೆ ಪ್ರಸ್ತಾಪಿಸತಕ್ಕ ಅವಶ್ಯಕತೆ ಇಲ್ಲ. ಈಗ ನಮಗೆ ೧೫೦ ಕೋಟಿ ರೂಪಾಯಿಗಳಿಂದ ೩೦೦ ಕೋಟಿ ರೂಪಾಯಿಗಳವರೆಗೆ ಸಾಲ ತೆಗೆದುಕೊಳ್ಳುವುದಕ್ಕೆ ಈ ಸಭೆಯ ಒಪ್ಪಿಗೆ ಬೇಕು ಅಷ್ಟೆ. ನಾವು ಅಷ್ಟನ್ನೂ ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳದೇ ಇರಬಹುದು. ನಾವು ಮುಂದಿನ ವರ್ಷಕ್ಕೆ ಹಾಕಿ ಕೊಂಡಿರತಕ್ಕ ಕಾರ್ಯಕ್ರಮಗಳಿಗೆ ೩೦೦ ಕೋಟಿ ರೂಪಾಯಿಗಳವರೆಗೆ ಸಾಲದ ಅವಶ್ಯಕತೆ ಬೀಳಬಹುದೆಂದು ಈ ವಿಚಾರವನ್ನು ಸದನದ ಮುಂದೆ ತಂದಿದ್ದೇವೆ. ಬೇರೆ ವಿಚಾರವನ್ನು ಬೇಕಾದರೆ ವಿದ್ಯುಚ್ಛಕ್ತಿ ಮಂಡಲಿಯ ಬಡ್ಜೆಟ್ಟನ್ನು ಅಥವಾ ಮಾಡಿರತಕ್ಕ ಸಾಧನೆಗಳನ್ನು ಸದನದ ಮುಂದಿಟ್ಟಾಗ ವಿವರ ನಾಡೋಣ. ಆದುದರಿಂದ ಸದನ ಈ ನಿರ್ಣಯಕ್ಕೆ ಅನುಮತಿ ಕೊಟ್ಟರೆ ಸಾಕು ಎಂದು ಕೇಳಿ ಕೊಳ್ಳುತ್ತೇನೆ.

MR. SPEAKER.—No I will put the motion to vote of the House. The question is ;

"WHEREAS under sub-section (3) of Section 65 of the Electricity (Supply) Act, 1948 (Central Act 54 of 1948) approval of the State Legislative Assembly is required for fixing a higher maximum amount than Rupees ten crores

which the Karnataka Electricity Board may, at any time have on loan under sub-section(1) of the said section ;

AND WHEREAS by the resolution passed by the Karnataka Legislative Assembly on the 27th of August, 1974 approval was accorded to the proposal of the State Government to fix rupees one hundred and fifty crores as the maximum amount which the Karnataka Electricity Board may, at any time, have on loan ;

AND WHEREAS in Order No. PWD 84 EEB 73, dated 10th September, 1974 issued in persuance of sub-section(3) of Section 65 of the said Act, the Government of Karnataka fixed, with effect from 27th August, 1974, rupees one hundred and fifty crores as the maximum amount which the Karnataka Electricity Board may, at any time, have on loan under sub-section(1) of the said section ;

AND WHEREAS the Government of Karnataka proposes to fix rupees three hundred crores as the maximum amount which the Karnataka Electricity Board may, at any time, have on loan under sub-section(1) of the said section ;

NOW THEREFORE the Karnataka Legislative Assembly hereby accords approval to the proposal of the State Government to fix under sub-section(3) of section 65 of the said Act rupees three hundred crores as the maximum amount which the Karnataka Electricity Board may, at any time, have on loan under sub-section(1) of the said section".

The motion was adopted

ಶ್ರೀ ಕೆ. ಹೆಚ್. ರಂಗನಾಥ್.—ನನ್ನ ಒಂದು ಮನವಿ ಏನೆಂದರೆ, ಸರ್ಕಾರ ಈ ತರಹ ಸಭೆಯನ್ನು ಕರೆಯತಕ್ಕ ಪರಿಸ್ಥಿತಿ ಒದಗಿಬಂದಾಗ ತಾವಾದರೂ ನಮಗೆ ಒಂದು ಕಾರ್ಯಕ್ರಮದ ಪಟ್ಟಿಯನ್ನು ಕೊಡುವುದು ಉತ್ತಮ, ಇಲ್ಲದಿದ್ದರೆ ಈ ಸದನವನ್ನು ಇಕ್ಕಟ್ಟಿಗೆ ಸಿಲುಕಿಸತಕ್ಕ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಬಹುದೆಂದು ಇದರಿಂದ ಸ್ಪಷ್ಟವಾಗುತ್ತದೆ. ಇದಾದ ಮೇಲೆ ಒಂದು ಮಸೂದೆ ಇದೆ. ಅದನ್ನು ಸಹ ನಮಗೆ ಓದಿಕೊಂಡು ಬರುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮೇಲ್ಮನೆಯ ಚುನಾವಣೆಗೋಸ್ಕರ ಕರೆದಿರುವುದು.

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ಇದೆಲ್ಲ ಏಕೆ ? ನಾವು ಅಲ್ಲಿ ಇಲ್ಲಿ ಓಡಾಡಿಕೊಂಡು ಓಟು ಹಾಕಿಕೊಳ್ಳುತ್ತಿದ್ದೆವು. ದೇವೇಗೌಡರು ಚುನಾವಣೆಗೋಸ್ಕರ ಸಭೆಯನ್ನು ಕರೆದಿದ್ದೇವೆಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಇದನ್ನು ಮೊದಲೇ ತಿಳಿಸಿದ್ದರೆ ನಾವು ಕೂಡ ಹೊರಗಡೆ ಕ್ಯಾನ್‌ವಾಸ್ ಮಾಡಿಕೊಂಡು ಬರುವ ಓಟುಗಳನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದೆವು.

ಅಧ್ಯಕ್ಷರು.—ತಾವು ಈ ಪೀಠದಲ್ಲಿ ಕುಳಿತು ಕೆಲಸ ಮಾಡಿದವರು. ಸರ್ಕಾರೀ ಕಾರ್ಯಕಲಾಪಗಳಿಗೆ "period of notice ಎಂದು ಎಲ್ಲಿದೆ ? They may take up any issue.

ಶ್ರೀ ಕೆ. ಹೆಚ್. ರಂಗನಾಥ್.—ತಾವೇನು ರೂಲಿಂಗ್ ತರಹ ಕೊಡುತ್ತಿದ್ದೀರೋ ಅಥವಾ ಪ್ರಸ್ತಾಪ ಮಾಡುತ್ತಿದ್ದೀರೋ ? ಪ್ರಸ್ತಾಪ ಮಾಡಿದರೆ ಆಗಬಹುದು. ಆದರೆ ರೂಲಿಂಗ್ ತರಹ ಕೊಟ್ಟರೆ ನಾಳೆ ದಿವಸ ಅವರು ಅದನ್ನೇ ಹಿಡಿದುಕೊಳ್ಳುತ್ತಾರೆ. ಇದರ ಬಗ್ಗೆ ಬೇಕಾದರೆ ನಾನು ಛೇಂಬರ್‌ನಲ್ಲಿ ಹೇಳುತ್ತೇನೆ.

SRI A. LAXMI SAGAR.—Sir, the remainder of the day's business may be taken up subsequently.

MR. SPEAKER.—Then, the House stands adjourned *sine die*.

The House adjourned at Two Minutes past Eleven of the Clock sine die.